# ಮುಕ್ತಾಯ

"ಮನುಷ್ಯನ ಮಾರ್ಗವು ತನ್ನಲ್ಲಿ ಇರುವದಿಲ್ಲ"ವಾದ್ದರಿಂದ (ಯೆರೆಮೀಯ 10:23) ತನ್ನ ಮಾರ್ಗಕ್ಕೆ ಬೆಳಕು ಕೊಡಲು ಮಾನವಾತೀತದ ಸಹಾಯದ ಅಗತ್ಯತೆ ಅವನಿಗಿದೆ. ಈ ಅಗತ್ಯತೆಯನ್ನು ಪೂರೈಸಲು ನಮ್ಮ ಪ್ರೀತಿಯ ದೇವರು ತನ್ನ ನಿತ್ಯ ವಾಕ್ಯವನ್ನು, ಬೈಬಲನ್ನು ಒದಗಿಸಿಕೊಟ್ಟನು. "ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧ ನಾಗಲು" (2 ತಿಮೊಥೆ 3:17) ಈ ಪರಿಶುದ್ಧ ಪುಸ್ತಕವು ರಚಿಸಲ್ಪಟ್ಟಿದೆ. ಅದರ ಪುಟಗಳಲ್ಲಿ ಜೀವಕ್ಕೂ ದೇವ ಭಕ್ತಿಗೂ ಸಂಬಂಧಿಸಿದ ಪ್ರತಿಯೊಂದೂ ಇರುತ್ತದೆ (2 ಪೇತ್ರ 1:3).

## ಬೈಬಲಿನ ಸಂಪೂರ್ಣತೆ

ಅಮೂಲ್ಯವಾದ ಆದರಣೆಯು ಹಾಗೂ ನಿರೀಕ್ಷೆಯ ಮೂಲವು ಬೈಬಲು ಸಂಪೂರ್ಣ ವಾಗಿತ್ತು, ಆಗಿರುತ್ತದೆ ಮತ್ತು ಯಾವಾಗಲೂ ಆಗಿರುವುದು ಎಂಬ ಭರವಸೆಯು. "ಎಲ್ಲಾ ಸತ್ಯದಲ್ಲಿ" ತನ್ನ ಅಪೊಸ್ತಲರನ್ನು ಪರಿಶುದ್ಧಾತ್ಮನು ನಡಿಸುವನೆಂದು ಯೇಸುವು ವಾಗ್ದಾನ ಮಾಡಿದ್ದಾನೆ (ಯೋಹಾನ 16:13). ಒಮ್ಮೆ ವಾಗ್ದಾನ ಮಾಡಲ್ಪಟ್ಟ ನಂತರ ಎಂದೂ ಹೊಸ ಪ್ರಕಟಣೆಯು ಮಾಡಲ್ಪಡುವದಿಲ್ಲ. ಆತ್ಮನು ತನ್ನ ಕಾರ್ಯವನ್ನು ಮುಗಿಸಿದಾಗ, "ಬಿಡುಗಡೆಯನ್ನುಂಟು ಮಾಡುವ ಸರ್ವೋತ್ತಮ ಧರ್ಮ ಪ್ರಮಾಣವು" (ಯಾಕೋಬ 1:25) ಬರಹಕ್ಕೆ ಒಪ್ಪಿಸಲ್ಪಟ್ಟಿತ್ತು ಮತ್ತು "ಒಂದೇ ಸಾರಿ" ಮನುಷ್ಯನಿಗೆ ಒಪ್ಪಿಸಲ್ಪಟ್ಟಿತು (ಯೂದ 3). ಒಮ್ಮೆ ಈ ಪರಲೋಕದ ಉದಾರವಾದ ಕಾರ್ಯವು ಕ್ರಿ.ಶ. ಮೊದಲನೆಯ ಶತಮಾನದಲ್ಲಿ ಮುಕ್ತಾಯಗೊಂಡಾಗ ಬೈಬಲಿನ ದಾಖಲೆಯಲ್ಲಿ ಮುಂದೆ ಯಾವುದೇ ಬದಲಾವಣೆಯು, ಅದು ದೇವದೂತನಿಂದ ಹೇಳಲ್ಪಟ್ಟರೂ ಮನುಷ್ಯರನ್ನು ತಪ್ಪುದಾರಿಗೆಳೆ ಯುತ್ತದೆ (ಗಲಾತ್ಯ 1:8, 9). ದೈವ ಪ್ರೇರಿತ ಆ ಮಾರ್ಗದರ್ಶಿ ಪುಸ್ತಕಕ್ಕೆ ಹೆಚ್ಚಾದದ್ದನ್ನು ಕೂಡಿಸಿದರೆ ಇಲ್ಲವೇ ತೆಗೆದು ಬಿಟ್ಟರೆ ಅಂಥವನ ಮೇಲೆ ಪರಲೋಕದಿಂದ ಶಾಪವು ಹಾಕಲ್ಪಡುತ್ತದೆ (2 ಯೋಹಾನ 9-11; ಪ್ರಕಟನೆ 22:18, 19). ಇದು ತಿದ್ದುಪಡಿಗೆ ಒಳಪಡದ, ತಿಳಿಯಲ್ಪಟ್ಟ ಒಂದೇ ಪುಸ್ತಕವಾಗಿದೆ. "ಸರಳವಾದ ಮತ್ತು ಅತೀ ಅಮೂಲ್ಯ ವಾದ ಭಾಗಗಳು" (ಮೊರ್ಮೋನ್‌ರ ಪುಸ್ತಕ; 1 ನೆಫಿ 13:26, 40ರಲ್ಲಿ ಹೇಳಿದಂತೆ) ಕಳೆದು ಹೋಗಿದ್ದರೆ, ಆಗ ಅಗತ್ಯತೆಯುಳ್ಳ ಪಾಪಿ ಮನುಷ್ಯನು ಸಹಾಯಹೀನ ಸ್ಥಿತಿಯಲ್ಲಿರುವನು. ಇದು ಸತ್ಯವಾಗಿದ್ದರೆ, ಪಾಪಿಗಳಿಗಾಗಿರುವ ದೇವರ ಪ್ರೀತಿಯು ಮತ್ತು ಆತನ ಪರಿಪೂರ್ಣ ಬೈಬಲಿನ ಆತನ ದೈವಿಕ ಆಶ್ರಯವು ಪ್ರಶಂಸಿಸಲ್ಪಡಲಾರದು.

ಅರಸರು, ಅವಿಶ್ವಾಸಿಗಳು ಮತ್ತು ಧರ್ಮನಿಷ್ಠೆಯುಳ್ಳವರು "ಕ್ರಿಯಾತ್ಮಕವಾದ ಬಲವುಳ್ಳ" ವಾಕ್ಯವು (ಇಬ್ರಿಯ 4:12), ಪರಲೋಕದಲ್ಲಿ ಮೂಲವುಳ್ಳ ಪುಸ್ತಕವು (2 ಪೇತ್ರ 1:21) ಬದಲಾಗಿರುವದಿಲ್ಲ, ಬದಲಾಗುವಂಥದ್ದಲ್ಲ. ಬೈಬಲಿನ ತನ್ನ ಭಾಗವು ನಾಶವಾಗಿ ಹೋಗುವದಿಲ್ಲವೆಂದು ಯೇಸು ದೃಢಪಡಿಸಿದ್ದಾನೆ. "ಭೂಮ್ಯಾಕಾಶಗಳು ಅಳಿದು ಹೋಗು ವವು, ಆದರೆ ನನ್ನ ಮಾತುಗಳು ಅಳಿದು ಹೋಗುವದೇ ಇಲ್ಲ" (ಮತ್ತಾಯ 24:35;

ನೋಡಿರಿ. ಯೋಹಾನ 12:48). ಇಡೀ ಬೈಬಲಿನ ವಿಷಯದಲ್ಲಿ ದೇವರ ವಾಗ್ದಾನವು "ಕರ್ತನ ಮಾತೋ ಸದಾಕಾಲವೂ ಇರುವುದು" (1 ಪೇತ್ರ 1:25).

## ಬೈಬಲಿನ ದೃಢಪಡಿಸುವಿಕೆ

ಪ್ರಾಚೀನವಸ್ತು ಸಂಶೋಧಕನ ಸಲಿಕೆಯು ಸತ್ಯಕ್ಕೆ ಮತ್ತು ಬೈಬಲಿಗೆ ಸ್ನೇಹಿತನಾಗಿದೆ. ಪಾಲೇಸ್ತಿನ ಭೂಗರ್ಭ ಶೋಧಿಸುವಿಕೆಯು ಅನೇಕ ವರ್ಷಗಳ ಕೆಲಸದ ನಂತರ, ಸನ್‌ಸಿನಾತಿಯ ಹಿಬ್ರೂ ಯೂನಿಯನ್ ಸೆಮಿನರಿಯ ಪ್ರೊಫೆಸರ್ ನೆಲ್ಸನ್ ಗ್ಲುಯೆರ್ ಅವರು ತಮ್ಮ ಹಾಗೂ ತಮ್ಮ ಜೊತೆಯವರ ಸಂಶೋಧನೆಗಳು ಬೈಬಲಿನ ಘಟನೆಗಳನ್ನು ದೃಢಪಡಿಸುತ್ತವೆ. ಬೈಬಲಿನ ಯಾವುದೇ ಐತಿಹಾಸಿಕ ಹೇಳಿಕೆಯನ್ನು "ಯಾವುದೇ ಪ್ರಾಚೀನ ವಸ್ತು ಶಾಸ್ತ್ರದ ಸಂಶೋಧನೆಯು ವಿರೋಧಿಸುವದಿಲ್ಲ ಇಲ್ಲವೇ ಖಂಡಿಸುವದಿಲ್ಲ" ಎಂದು ಹೇಳಿದ್ದಾರೆ.[1]

## ಮುಕ್ತಾಯ

ಅರ್ಥ ಮಾಡಿಕೊಳ್ಳುವ ಭರವಸೆಯೊಂದಿಗೆ ಕ್ರೈಸ್ತರು ಪರಲೋಕದ ಪ್ರಕಟನೆಗಾಗಿ ಅವರ ಅಗತ್ಯತೆಯು ಪರಲೋಕದ ಪುಸ್ತಕದ ವರದಲ್ಲಿ ತುಂಬಿಕೊಂಡಿದೆ ಎಂದು ನಂಬುವದನ್ನು ಮುಂದುವರಿಸುವುದು. ಒಳ್ಳೇ ಕೊಡುಗೆಗಾರನು ಎಲ್ಲಾ ಸಂತತಿಯವರಿಗೆ ದೈವಿಕ ರಕ್ಷಣೆಗಾಗಿರುವ ಆ ವರದ ಅಗತ್ಯತೆಯನ್ನು ಪೂರೈಸಿದ್ದಾನೆ.

---

ಟಿಪ್ಪಣಿ

[1]Nelson Glueck, "New York Times Book Review," *New York Times* (28 October 1956).

© 2009 Truth for Today